# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲು: 14 / ಪಿಡಬ್ಲು: 6

ದಿನಾಂಕ: 26.11.2024

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಹರಿ ನಗರ |
| ತಂದೆಯ ಹೆಸರು | : | ತಾವರೆಪ್ಪ |
| ವಯಸ್ಸು | : | 23 ವರ್ಷ |
| ಉದ್ಯೋಗ | : | ವಿದ್ಯಾರ್ಥಿ |
| ವಾಸ ಸ್ಥಳ | : | ಹತ್ತಿಕಟ್ಟಿ ಗ್ರಾಮ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಮೃತ ಸೋಮಲೆಪ್ಪ ನಾಯಕ ನನ್ನ ತಾಯಿಯ ತಮ್ಮನಿರುತ್ತಾನೆ ಮತ್ತು ಆತ ನನಗೆ ಮಾವನಾಗಬೇಕು. ಪ್ರಾಸಾ-1 ರವರು ಮೃತ ಸೋಮಲೆಪ್ಪ ರವರ ಹೆಂಡತಿ ಇರುತ್ತಾಳೆ. ನನಗೆ ಚಾಸಾ-10 ರಿಂದ 13, ಪ್ರಾಸಾ-5, ಚಾಸಾ-16 ಮತ್ತು 17 ರವರು ಪರಿಚಯ ಇದ್ದು, ಅವರು ನಮ್ಮ ಊರಿನವರು ಇರುತ್ತಾರೆ.

2. ಮೃತ ಸೋಮಲೆಪ್ಪ ನಾಯಕ ರವರು ಹತ್ತಿಕಟ್ಟಿ ಗ್ರಾಮದ ನಾಯಕರಾಗಿದ್ದರು. ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ಆರೋಪಿ ನನಗೆ ಗೊತ್ತು. ಆರೋಪಿಗೆ ಮದುವೆಯಾಗಿದ್ದು, ಆತನಿಗೆ ಮಕ್ಕಳು ಇರುತ್ತಾರೆ. ಆರೋಪಿಯ ಹೆಂಡತಿಯ ತವರು ಮನೆ ಯಾವುದು ಎಂದು ನನಗೆ ಗೊತ್ತಿಲ್ಲ. ಆರೋಪಿ ಮತ್ತು ಆತನ ಹೆಂಡತಿಯ ಸಂಸಾರ ಚೆನ್ನಾಗಿರಲಿಲ್ಲ. ಈ ಕಾರಣಕ್ಕಾಗಿ ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರಿಗೆ ತನ್ನ ಸಂಸಾರವನ್ನು ಸರಿಪಡಿಸಬೇಕೆಂದು ಕೇಳುತ್ತಿದ್ದರು. ಈ ಬಗ್ಗೆ ಮೃತ ಸೋಮಲೆಪ್ಪ ನಾಯಕ ಇವರು ಆರೋಪಿಗೆ ಮತ್ತು ಆರೋಪಿಯ ಹೆಂಡತಿಗೆ ಬುದ್ದಿ ಹೇಳಿದ್ದರು. ಆದರೂ ಕೂಡಾ ಆರೋಪಿಯು ಸುಧಾರಿಸಿರಲಿಲ್ಲ ಮತ್ತು ಆತನ ಸಂಸಾರ ಸರಿ ಹೋಗಿರಲಿಲ್ಲ. ತನ್ನ ಸಂಸಾರವನ್ನು ಸರಿ ಮಾಡಿರುವುದಿಲ್ಲ ಎಂದು ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರ ವಿರುದ್ಧ ದ್ವೇಷವನ್ನು ಸಾಧಿಸುತ್ತಿದ್ದನು.

3. ದಿ: 04.03.2022 ರಂದು, ರಾತ್ರಿ 08.30 ಗಂಟೆಗೆ ಮೃತ ಸೋಮಲೆಪ್ಪ ನಾಯಕ,

ಚಾಸಾ-11, 12, 13 ಹಾಗೂ ಚಾಸಾ-10 ರವರು ದೇವಸ್ಥಾನದ ಉದ್ಘಾಟನೆ ಮಾಡುವ ಬಗ್ಗೆ ಮಾತನಾಡಲು ಸೇರಿದ್ದರು. ಆ ಸಮಯದಲ್ಲಿ ನಾನು ತಾವರೆಪ್ಪ ನಾಯಕ ಇವರ ಅಂಗಡಿ ಹತ್ತಿರ ಕುಳಿತುಕೊಂಡಿದ್ದಾಗ, ಹತ್ತಿಕಟ್ಟಿ ತಾಂಡಾದ ಸೇವಾಲಾಲ ದೇವಸ್ಥಾನದಲ್ಲಿ ಚೀರಾಡುವ ಶಬ್ದ ನನಗೆ ಕೇಳಿಸಿರುತ್ತದೆ. ಆಗ ನಾನು ಸದರಿ ಸೇವಾಲಾಲ ದೇವಸ್ಥಾನದ ಹತ್ತಿರ ಹೋದಾಗ, ಆರೋಪಿಯು ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ತಿವಿದಿರುತ್ತಾನೆ ಎಂದು ನನಗೆ ಗೊತ್ತಾಯಿತು. ತಕ್ಷಣ ನಾನು ಪ್ರಾಸಾ-1 ರವರ ಮನೆಗೆ ಹೋಗಿ, ಈ ವಿಷಯವನ್ನು ತಿಳಿಸಿ, ಪ್ರಾಸಾ-1 ರವರನ್ನು ಸೇವಾಲಾಲ ದೇವಸ್ಥಾನಕ್ಕೆ ಕರೆದುಕೊಂಡು ಬಂದು, ಸೋಮಲೆಪ್ಪ ನಾಯಕ ಇವರನ್ನು ನೋಡಿದಾಗ, ಆತನ ಕುತ್ತಿಗೆ, ಗದ್ದ, ಹೊಟ್ಟೆ, ಹೊಕ್ಕಳದ ಹತ್ತಿರ ಮತ್ತು ಕೈಗೆ ಚಾಕುವಿನಿಂದ ಚುಚ್ಚಿದ ರಕ್ತ ಗಾಯಗಳಾಗಿದ್ದವು.

4. ಅಲ್ಲೇ ಇದ್ದ ಚಾಸಾ-10 ರವರಿಗೆ ನಾವು ವಿಚಾರಿಸಿದಾಗ, ಚಾಸಾ-10 ರವರು ತಾನು, ಮೃತ ಸೋಮಲೆಪ್ಪ, ಚಾಸಾ-11, 12, 13 ರವರು ದೇವಸ್ಥಾನದ ಉದ್ಘಾಟನೆ ಬಗ್ಗೆ ಮಾತನಾಡುತ್ತಾ ಕುಳಿತುಕೊಂಡಿದ್ದಾಗ, ಆರೋಪಿಯು ಅಲ್ಲಿಗೆ ಬಂದು, ಸೋಮಲೆಪ್ಪನಿಗೆ ಅವಾಚ್ಯ ಶಬ್ದಗಳಿಂದ ಬೈದು, ಇಲ್ಲಿ ಕುಳಿತು ಏನು ಮಾಡುತ್ತೀ, ನನ್ನ ಸಂಸಾರವನ್ನು ಸರಿ ಮಾಡು ಬಾ ಎಂದು ಹೇಳಿ, ಕಾಲಿನಿಂದ ಸೋಮಲೆಪ್ಪನಿಗೆ ಒದ್ದು, ಚಾಕುವಿನಿಂದ ಸೋಮಲೆಪ್ಪನ ಕುತ್ತಿಗೆಗೆ, ಗದ್ದಕ್ಕೆ, ಹೊಟ್ಟೆಗೆ, ಹೊಕ್ಕಳದ ಹತ್ತಿರ ಮತ್ತು ಕೈಗೆ ಚುಚ್ಚಿರುತ್ತಾನೆ ಮತ್ತು ಆರೋಪಿಯ ಹತ್ತಿರ ಇದ್ದ ಇನ್ನೊಂದು ಚೂರಿಯನ್ನು ಚಾಸಾ-13 ರವರು ಕಸಿದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ.

5. ಮೃತ ಸೋಮಲೆಪ್ಪ ನಾಯಕ ಈತನು ದೇವಸ್ಥಾನದ ಒಳಗೆ ಒಂದು ಕಂಬದ ಹತ್ತಿರ ಕುಳಿತುಕೊಂಡಿದ್ದು, ಅಲ್ಲಿ ರಕ್ತ ಹರಿದಿತ್ತು. ನಂತರ ನಾನು, ಪ್ರಾಸಾ-1 ರವರು ಸೇರಿ ಪ್ರಾಸಾ-5 ರವರ ಬೊಲೇರೋ ವಾಹನದಲ್ಲಿ ಮೃತ ಸೋಮಲೆಪ್ಪನನ್ನು ಹಾಕಿಕೊಂಡು ಗದಗ ಜಿಲ್ಲಾ ಆಸ್ಪತ್ರೆಗೆ ಬಂದಿರುತ್ತೇವೆ. ಆಗ ವೈದ್ಯರು ಸದರಿ ಸೋಮಲೆಪ್ಪನನ್ನು ಪರೀಕ್ಷೆ ಮಾಡಿ, ಆತನು ಮೃತಪಟ್ಟಿರುತಾತನೆ ಎಂದು ಹೇಳಿರುತ್ತಾರೆ. ಆಗ ಸಮಯ ರಾತ್ರಿ 09.45 ಗಂಟೆಯಾಗಿತ್ತು. ಈ ಬಗ್ಗೆ ಪ್ರಾಸಾ-1 ರವರು ಆರೋಪಿಯ ವಿರುದ್ಧ ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ. ಈಗ ತೋರಿಸಿದ ನಿಪಿ-2 ರಲ್ಲಿ ಕಾಣಿಸುವ ದೇವಸ್ಥಾನವು ಹತ್ತಿಕಟ್ಟಿ ಗ್ರಾಮದಲ್ಲಿರುವ ಸೇವಾಲಾಲ ದೇವಸ್ಥಾನ ಆಗಿರುತ್ತದೆ. ಈಗ ತೋರಿಸಿದ ನಿಪಿ-3 ರಲ್ಲಿ ಕಾಣಿಸುವ ರಕ್ತ ಹರಿದಿರುವ ಕಂಬದ ಹತ್ತಿರವೇ ಸದರಿ ಮೃತ ಸೋಮಲೆಪ್ಪ ನಾಯಕ ಈತನು ಕುಳಿತುಕೊಂಡಿದ್ದನು. ಮೃತ ಸೋಮಲೆಪ್ಪನನ್ನು ಆರೋಪಿಯೇ ತನ್ನ ಸಂಸಾರವನ್ನು ಸರಿ ಮಾಡಿಲ್ಲ ಎಂದು ಹೇಳಿ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುತ್ತಾನೆ.

6. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಶ್ರೀ ಎಂ.ಕೆ. ಚವಡಿ ವಕೀಲರಿಂದ, ಶ್ರೀ ಸಿ. ಎಸ್. ಸಂಕನಗೌಡರ, ಆರೋಪಿ ಪರ ವಕೀಲರ ಪರವಾಗಿಃ**

7. ನನಗೆ ಆರೋಪಿಯ ಕುಟುಂಬದ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಆರೋಪಿಯು ಗೋವಿನ ಜೋಳದ ವ್ಯಾಪಾರ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ವ್ಯಾಪಾರದಿಂದಾಗಿ ಆರ್ಥಿಕವಾಗಿ ಸದೃಢನಾಗಿದ್ದರಿಂದ, ಊರಿನಲ್ಲಿ ಆತನಿಗೆ ಗೌರವ ಕೊಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಏಳಿಗೆಯನ್ನು ಸಹಿಸಲಾರದೇ, ಈ ಘಟನೆಯನ್ನು ಆತನ ಮೇಲೆ ಹೊರಿಸಲಾಗಿರುತ್ತದೆ ಎಂದರೆ ಸರಿಯಲ್ಲ.

8. ನಾನು ಅಂಗಡಿಯ ಹತ್ತಿರ ಕುಳಿತುಕೊಂಡಿದ್ದಾಗ, ಸಮಯ ರಾತ್ರಿ 08.20 ಗಂಟೆಯಾಗಿತ್ತು. ಸದರಿ ಅಂಗಡಿಗೂ ಮತ್ತು ಸದರಿ ಸೇವಾಲಾಲ ದೇವಸ್ಥಾನಕ್ಕೂ ಮಧ್ಯದಲ್ಲಿ ನಾಲ್ಕು ಮನೆಗಳು ಬರುತ್ತವೆ. ಸದರಿ ಅಂಗಡಿಯಿಂದ ಸದರಿ ಸೇವಾಲಾಲ ದೇವಸ್ಥಾನಕ್ಕೆ ಬರಲು 10 ನಿಮಿಷ ಹಿಡಿಯುತ್ತದೆ. ನಾನು ಸದರಿ ಅಂಗಡಿ ಹತ್ತಿರ ಕುಳಿತುಕೊಂಡಿದ್ದಾಗ, ನನಗೆ ಕೇಳಿಸಿದ ಚೀರಾಡುವ ಧ್ವನಿಯು ಯಾರದು ಎಂದು ನನಗೆ ಗೊತ್ತಾಗಲಿಲ್ಲ. ಆ ದಿನ ಸದರಿ ಅಂಗಡಿ ಹತ್ತಿರ ನಾನೊಬ್ಬನೇ ಕುಳಿತುಕೊಂಡಿದ್ದೆನು. ನಾನು ಸದರಿ ಸೇವಾಲಾಲ ದೇವಸ್ಥಾನಕ್ಕೆ ಹೋದಾಗ, ಸಮಯ ರಾತ್ರಿ 08.30 ಗಂಟೆಯಾಗಿತ್ತು. ಆಗ ಮೃತ ಸೋಮಲೆಪ್ಪ ನಾಯಕ, ಚಾಸಾ-10 ರಿಂದ 13 ರವರು ಇದ್ದರು.

9. ಸದರಿ ಸೇವಾಲಾಲ ದೇವಸ್ಥಾನವು ಊರಿನ ಒಳಗೆ ಇರುತ್ತದೆ. ಹಳ್ಳಿಗಳಲ್ಲಿ ಸ್ವಲ್ಪ ಗದ್ದಲವಾದರೆ ಜನರು ಸೇರುತ್ತಾರೆ ಎಂದರೆ ಸರಿ. ನಾನು ಸದರಿ ಸೇವಾಲಾಲ ದೇವಸ್ಥಾನಕ್ಕೆ ಹೋದಾಗ, ಮೃತ ಸೋಮಲೆಪ್ಪ ನಾಯಕ, ಚಾಸಾ-10 ರಿಂದ 13 ರವರನ್ನು ಹೊರತುಪಡಿಸಿ, ಬೇರೆ ಯಾರೂ ಇರಲಿಲ್ಲ. ನಾನು ಸದರಿ ದೇವಸ್ಥಾನಕ್ಕೆ ಹೋದಾಗ, ಆರೋಪಿ ಅಲ್ಲಿ ಇರಲಿಲ್ಲ.

10. ಆರೋಪಿಯ ಏಳಿಗೆಯನ್ನು ಸಹಿಸಲಾರದೇ, ಫ್ರಾಸಾ-1, ಚಾಸಾ-10 ರಿಂದ 13 ರವರು ಸೇರಿ ಸುಳ್ಳು ಕಥೆಯನ್ನು ಕಟ್ಟಿ ಆರೋಪಿಯ ವಿರುದ್ಧ ಸುಳ್ಳು ದೂರನ್ನು ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಫ್ರಾಸಾ-1 ರವರು ನನಗೆ ಅತ್ತೆಯಾಗಿದ್ದರಿಂದ, ಅವರು ಕೊಟ್ಟ ದೂರಿಗೆ ಅನುಗುಣವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ಫ್ರಾಸಾ-5 ರವರ ಮನೆಗೆ ನಾನು ಹೋದಾಗ, ಸಮಯ ರಾತ್ರಿ 08.30 ಆಗಿತ್ತು. ಫ್ರಾಸಾ-5 ರವರಿಗೆ ಸೇರಿದ ಬೋಲೇರೋ ವಾಹನದ ನಂಬರು ನನಗೆ ಗೊತ್ತಿಲ್ಲ. ಫ್ರಾಸಾ-5 ರವರು ಗೋವಾಕ್ಕೆ ದುಡಿಯಲು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಫ್ರಾಸಾ-5 ರವರು ಗೋವಾಕ್ಕೆ ದುಡಿಯಲು ಹೋಗಿದ್ದರೂ ಕೂಡಾ, ಆತನು ಊರಿನಲ್ಲಿಯೇ ದುಡಿಯುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಪ್ರಾಸಾ-5 ರವರ ಬೋಲೇರೋ ವಾಹನ ಇರುವುದಿಲ್ಲ ಮತ್ತು ಆತನು ನಮ್ಮ ಜೊತೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ಪ್ರಾಸಾ-1 ಮತ್ತು ಪ್ರಾಸಾ-5 ರವರು ಸೇರಿ ಸೋಮಲೆಪ್ಪನನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ನಾನು, ಪ್ರಾಸಾ-1 ಮತ್ತು ಪ್ರಾಸಾ-5 ರವರು ಸೋಮಲೆಪ್ಪ ನಾಯಕ ಈತನನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ ಎಂದು ಹೇಳಿ ಬರೆಸಿರುತ್ತೇವೆ.

12. ಮೃತ ಸೋಮಲೆಪ್ಪ ನಾಯಕ ಇವರು ಬೇರೆ ಯಾವುದೋ ಕಾರಣಕ್ಕೆ ಮೃತಪಟ್ಟಿದ್ದರೂ ಕೂಡಾ, ಆರೋಪಿಯೇ ಆತನ ಕೊಲೆ ಮಾಡಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ಹತ್ತಿಕಟ್ಟಿ ಗ್ರಾಮದಲ್ಲಿ ದನಗಳು ಇರುತ್ತವೆ ಎಂದರೆ ಸರಿ. ಹತ್ತಿಕಟ್ಟಿ ಗ್ರಾಮವು ಕಪ್ಪತ್ತಗುಡ್ಡಕ್ಕೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. ಸದರಿ ಕಪ್ಪತ್ತಗುಡ್ಡದಲ್ಲಿ ಜಿಂಕೆ ಮತ್ತು ಚಿಗರೆಗಳು ಇರುತ್ತವೆ ಎಂದರೆ ಸರಿ. ಸದರಿ ಜಿಂಕೆ ಮತ್ತು ಚಿಗರೆಗಳು ಹತ್ತಿಕಟ್ಟಿ ಗ್ರಾಮದ ಜಮೀನುಗಳಿಗೆ ಬಂದು ಬೆಳೆಯನ್ನು ಮೇಯ್ದು ಹೋಗುತ್ತವೆ ಎಂದರೆ ಸರಿಯಲ್ಲ. ಸೋಮಲೆಪ್ಪ ನಾಯಕ ಈತನಿಗೆ ಯಾವುದೋ ಪ್ರಾಣಿಯಿಂದ ಗಾಯಗಳಾಗಿದ್ದು, ಅದನ್ನು ಆರೋಪಿಯ ಮೇಲೆ ಹಾಕಲಾಗಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ಮೃತ ಸೋಮಲೆಪ್ಪ ನಾಯಕ ರವರು ಹತ್ತಿಕಟ್ಟಿ ಗ್ರಾಮದ ನಾಯಕರಾಗಿದ್ದರು ಮತ್ತು ಆರೋಪಿಗೆ ಮದುವೆಯಾಗಿದ್ದು, ಆತನಿಗೆ ಮಕ್ಕಳು ಇರುತ್ತಾರೆ ಮತ್ತು ಆರೋಪಿ ಮತ್ತು ಆತನ ಹೆಂಡತಿಯ ಸಂಸಾರ ಚೆನ್ನಾಗಿರಲಿಲ್ಲ ಮತ್ತು ಈ ಕಾರಣಕ್ಕಾಗಿ ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರಿಗೆ ತನ್ನ ಸಂಸಾರವನ್ನು ಸರಿಪಡಿಸಬೇಕೆಂದು ಕೇಳುತ್ತಿದ್ದರು ಮತ್ತು ಈ ಬಗ್ಗೆ ಮೃತ ಸೋಮಲೆಪ್ಪ ನಾಯಕ ಇವರು ಆರೋಪಿಗೆ ಮತ್ತು ಆರೋಪಿಯ ಹೆಂಡತಿಗೆ ಬುದ್ದಿ ಹೇಳಿದ್ದರು ಮತ್ತು ಆದರೂ ಕೂಡಾ ಆರೋಪಿಯು ಸುಧಾರಿಸಿರಲಿಲ್ಲ ಮತ್ತು ಆತನ ಸಂಸಾರ ಸರಿ ಹೋಗಿರಲಿಲ್ಲ ಮತ್ತು ತನ್ನ ಸಂಸಾರವನ್ನು ಸರಿ ಮಾಡಿರುವುದಿಲ್ಲ ಎಂದು ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರ ವಿರುದ್ಧ ದ್ವೇಷವನ್ನು ಸಾಧಿಸುತ್ತಿದ್ದನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ದಿಃ 04.03.2022 ರಂದು, ರಾತ್ರಿ 08.30 ಗಂಟೆಗೆ ಮೃತ ಸೋಮಲೆಪ್ಪ ನಾಯಕ, ಚಾಸಾ-11, 12, 13 ಹಾಗೂ ಚಾಸಾ-10 ರವರು ದೇವಸ್ಥಾನದ ಉದ್ಘಾಟನೆ ಮಾಡುವ ಬಗ್ಗೆ ಮಾತನಾಡಲು ಸೇರಿದ್ದರು ಮತ್ತು ಆ ಸಮಯದಲ್ಲಿ ನಾನು ತಾವರೆಪ್ಪ ನಾಯಕ ಇವರ ಅಂಗಡಿ ಹತ್ತಿರ

ಕುಳಿತುಕೊಂಡಿದ್ದಾಗ, ಹತ್ತಿಕಟ್ಟಿ ತಾಂಡಾದ ಸೇವಾಲಾಲ ದೇವಸ್ಥಾನದಲ್ಲಿ ಚೀರಾಡುವ ಶಬ್ದ ನನಗೆ ಕೇಳಿಸಿರುತ್ತದೆ ಮತ್ತು ಆಗ ನಾನು ಸದರಿ ಸೇವಾಲಾಲ ದೇವಸ್ಥಾನದ ಹತ್ತಿರ ಹೋದಾಗ, ಆರೋಪಿಯು ಸೋಮಲೆಪ್ಪ ನಾಯಕ ಇವರಿಗೆ ಚಾಕುವಿನಿಂದ ತಿವಿದಿರುತ್ತಾನೆ ಎಂದು ನನಗೆ ಗೊತ್ತಾಯಿತು ಮತ್ತು ತಕ್ಷಣ ನಾನು ಪ್ರಾಸಾ-1 ರವರ ಮನೆಗೆ ಹೋಗಿ, ಈ ವಿಷಯವನ್ನು ತಿಳಿಸಿ, ಪ್ರಾಸಾ-1 ರವರನ್ನು ಸೇವಾಲಾಲ ದೇವಸ್ಥಾನಕ್ಕೆ ಕರೆದುಕೊಂಡು ಬಂದು, ಸೋಮಲೆಪ್ಪ ನಾಯಕ ಇವರನ್ನು ನೋಡಿದಾಗ, ಆತನ ಕುತ್ತಿಗೆ, ಗದ್ದ, ಹೊಟ್ಟೆ, ಹೊಕ್ಕಳದ ಹತ್ತಿರ ಮತ್ತು ಕೈಗೆ ಚಾಕುವಿನಿಂದ ಚುಚ್ಚಿದ ರಕ್ತ ಗಾಯಗಳಾಗಿದ್ದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ಅಲ್ಲೇ ಇದ್ದ ಚಾಸಾ-10 ರವರಿಗೆ ನಾವು ವಿಚಾರಿಸಿದಾಗ, ಚಾಸಾ-10 ರವರು ತಾನು, ಮೃತ ಸೋಮಲೆಪ್ಪ, ಚಾಸಾ-11, 12, 13 ರವರು ದೇವಸ್ಥಾನದ ಉದ್ಘಾಟನೆ ಬಗ್ಗೆ ಮಾತನಾಡುತ್ತಾ ಕುಳಿತುಕೊಂಡಿದ್ದಾಗ, ಆರೋಪಿಯು ಅಲ್ಲಿಗೆ ಬಂದು, ಸೋಮಲೆಪ್ಪನಿಗೆ ಅವಾಚ್ಯ ಶಬ್ದಗಳಿಂದ ಬೈದು, ಇಲ್ಲಿ ಕುಳಿತು ಏನು ಮಾಡುತ್ತೀ, ನನ್ನ ಸಂಸಾರವನ್ನು ಸರಿ ಮಾಡು ಬಾ ಎಂದು ಹೇಳಿ, ಕಾಲಿನಿಂದ ಸೋಮಲೆಪ್ಪನಿಗೆ ಒದ್ದು, ಚಾಕುವಿನಿಂದ ಸೋಮಲೆಪ್ಪನ ಕುತ್ತಿಗೆಗೆ, ಗದ್ದಕ್ಕೆ, ಹೊಟ್ಟೆಗೆ, ಹೊಕ್ಕಳದ ಹತ್ತಿರ ಮತ್ತು ಕೈಗೆ ಚುಚ್ಚಿರುತ್ತಾನೆ ಮತ್ತು ಆರೋಪಿಯ ಹತ್ತಿರ ಇದ್ದ ಇನ್ನೊಂದು ಚೂರಿಯನ್ನು ಚಾಸಾ-13 ರವರು ಕಸಿದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ಮೃತ ಸೋಮಲೆಪ್ಪ ನಾಯಕ ಈತನು ದೇವಸ್ಥಾನದ ಒಳಗೆ ಒಂದು ಕಂಬದ ಹತ್ತಿರ ಕುಳಿತುಕೊಂಡಿದ್ದು, ಅಲ್ಲಿ ರಕ್ತ ಹರಿದಿತ್ತು ಮತ್ತು ನಂತರ ನಾನು, ಪ್ರಾಸಾ-1 ರವರು ಸೇರಿ ಪ್ರಾಸಾ-5 ರವರ ಬೊಲೇರೋ ವಾಹನದಲ್ಲಿ ಮೃತ ಸೋಮಲೆಪ್ಪನನ್ನು ಹಾಕಿಕೊಂಡು ಗದಗ ಜಿಲ್ಲಾ ಆಸ್ಪತ್ರೆಗೆ ಬಂದಿರುತ್ತೇವೆ ಮತ್ತು ಆಗ ವೈದ್ಯರು ಸದರಿ ಸೋಮಲೆಪ್ಪನನ್ನು ಪರೀಕ್ಷೆ ಮಾಡಿ, ಆತನು ಮೃತಪಟ್ಟಿರುತಾತನೆ ಎಂದು ಹೇಳಿರುತ್ತಾರೆ ಮತ್ತು ಆಗ ಸಮಯ ರಾತ್ರಿ 09.45 ಗಂಟೆಯಾಗಿತ್ತು ಮತ್ತು ಈ ಬಗ್ಗೆ ಪ್ರಾಸಾ-1 ರವರು ಆರೋಪಿಯ ವಿರುದ್ಧ ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ ಮತ್ತು ನಿಪಿ-2 ರಲ್ಲಿ ಕಾಣಿಸುವ ದೇವಸ್ಥಾನವು ಹತ್ತಿಕಟ್ಟಿ ಗ್ರಾಮದಲ್ಲಿರುವ ಸೇವಾಲಾಲ ದೇವಸ್ಥಾನ ಆಗಿರುತ್ತದೆ ಮತ್ತು ನಿಪಿ-3 ರಲ್ಲಿ ಕಾಣಿಸುವ ರಕ್ತ ಹರಿದಿರುವ ಕಂಬದ ಹತ್ತಿರವೇ ಸದರಿ ಮೃತ ಸೋಮಲೆಪ್ಪ ನಾಯಕ ಈತನು ಕುಳಿತುಕೊಂಡಿದ್ದನು ಮತ್ತು ಮೃತ ಸೋಮಲೆಪ್ಪನನ್ನು ಆರೋಪಿಯೇ ತನ್ನ ಸಂಸಾರವನ್ನು ಸರಿ ಮಾಡಿಲ್ಲ ಎಂದು ಹೇಳಿ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಹತ್ತಿಕಟ್ಟಿ ಗ್ರಾಮದಲ್ಲಿ ಮೃತ ಸೋಮಲೆಪ್ಪನನ್ನು ಹೊರತುಪಡಿಸಿ, ಬೇರೆ ಹಿರಿಯರು ಇರುತ್ತಾರೆ ಎಂದರೆ ಸರಿ. ಸದರಿ ಹಿರಿಯರು ಕೂಡಾ ಗ್ರಾಮದಲ್ಲಿ ಯಾವುದೇ ಕಾರ್ಯಕ್ರಮ ಇದ್ದರೆ ಅದನ್ನು ನಿಭಾಯಿಸುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಆ ಹಿರಿಯರು ಚಾಸಾ-10 ರಿಂದ 13 ರವರು ಇರುತ್ತಾರೆ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**